ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 26–12–2018

## ಪತ್ರಿಕಾ ಆಮಂತ್ರಣ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆ:

ಅಧ್ಯಕ್ಷತೆ:

ಸಿ. ಮುನಿರಾಜು,
ಅಧ್ಯಕ್ಷರು,
ಬೆಂಗಳೂರು ನಗರ ಜಿಲ್ಲಾ ಪಂಚಾಯತ್,

ದಿನಾಂಕ: 27–12–2018 ಗುರುವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ಜಿಲ್ಲಾ ಪಂಚಾಯತ್ ಸಭಾಂಗಣ, ಕನಕಪುರ ರಸ್ತೆ, ಬನಶಂಕರಿ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## FOR CREATING BRANDING LOGO OF EV CHARGING STATION

Bengaluru, Dec.26 (Karnataka Information

The State Government has issued Electric Vehicle and Energy Storage policy to promote e-mobility. In support of the policy BESCOM has initiated a program to set up Electric Vehicle charging stations at various places in Bangalore city and plans to do the Branding with innovative logo. The proposed branding is for identifying the Electric vehicle charging stations similar to fuel stations, metro etc.

This invitation in search of creative and original logo is open to all and selected one entry shall be rewarded with a prize money of Rs. 25000.

The selected design will henceforth be intellectual property of the BESCOM. The designed EV Logo in hard (A-3 or A-4 size paper, White Background, 100-130 gsm thick) & soft (C.D) copy shall be submitted in an envelope super scribed as **"BESCOM EV Logo Competition".** The entries shall be submitted through Post/In person on or before 17.01.2019, 17:00 hrs to the following address:

**The Deputy General Manager (SG& EV)**
**1st Floor, Block -2,**
**Corporate Office, BESCOM**
**K.R Circle, Bangalore – 560001**
**Ph:080 22204344**
**e-Mail: dgmsg@bescom.co.in, dgmsgev@gmail.com**

**ವಿದ್ಯುತ್‌ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರಗಳ ಬ್ರ್ಯಾಂಡಿಂಗ್‌ಗಾಗಿ**
**ಲಾಂಛನ ವಿನ್ಯಾಸದ ಸ್ಪರ್ಧೆ ಬಗ್ಗೆ ಪ್ರಕಟಣೆ**

ಬೆಂಗಳೂರು, ಡಿಸೆಂಬರ್ 26, (ಕರ್ನಾಟಕ ವಾರ್ತೆ)

ಇ–ಚಲನಶೀಲತೆಯನ್ನು ಉತ್ತೇಜಿಸಲು ಕರ್ನಾಟಕ ಸರ್ಕಾರ ಎಲೆಕ್ಟ್ರಿಕ್ ವೆಹಿಕಲ್ ಮತ್ತು ಎನರ್ಜಿ ಶೇಖರಣಾ ನೀತಿಯನ್ನು ಹೊರಡಿಸಿದೆ. ಬೆಂಗಳೂರು ವಿದ್ಯುತ್ ಕಂಪನಿಯು ಈ ನೀತಿಯನ್ನು ಬೆಂಬಲಿಸುತ್ತಾ ಬೆಂಗಳೂರು ನಗರದಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಬ್ರ್ಯಾಂಡಿಂಗ್‌ಗಾಗಿ ನವೀನ ಲಾಂಛನವನ್ನು ಪ್ರತಿಪಾದಿಸಲು ಯೋಚಿಸಿದೆ.

ಹಾಲಿ ಇರುವ ಪೆಟ್ರೋಲ್ ಬಂಕ್‌ಗಳು, ಮೆಟ್ರೊ ಮುಂತಾದವುಗಳನ್ನು ಲಾಂಛನಗಳೊಂದಿಗೆ ಗುರುತಿಸುವಂತೆ, ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸಹ ಲಾಂಛನದೊಂದಿಗೆ ಗುರುತಿಸಲು ಉದ್ದೇಶಿಸಿದೆ.

ತತ್ಸಂಬಂಧ, ಸೃಜನಶೀಲ ಮತ್ತು ಅಸಲಿ ಲಾಂಛನದ ವಿನ್ಯಾಸವನ್ನು ರಚಿಸುವ ಕಾರ್ಯದಲ್ಲಿ ಪಾಲ್ಗೊಳ್ಳಲು ಎಲ್ಲಾ ಸಾರ್ವಜನಿಕರಿಗೆ ಆಹ್ವಾನ ನೀಡಲಾಗಿದೆ. ರಚಿಸಿದ ವಿನ್ಯಾಸಗಳನ್ನು ದಿನಾಂಕ: 17–01–2019, ಸಂಜೆ 5–00 ಗಂಟೆಯೊಳಗೆ **ಉಪ–ಪ್ರಧಾನ ವ್ಯವಸ್ಥಾಪಕರು (SG & EV), 1ನೇ ಮಹಡಿ, ಬ್ಲಾಕ ಸಂಖ್ಯೆ–2**

**ನಿಗಮ ಕಾರ್ಯಾಲಯ, ಬೆವಿಕಂ ಕೆ.ಆರ್ ವೃತ್ತ, ಬೆಂಗಳೂರು ದೂರವಾಣಿ:080 2220 4344**
**ಇ–ಮೇಲ್:**dgmsg@bescom.co.in**, dgmsgev@gmail.com**

ವಿಳಾಸಕ್ಕೆ ಕಾಗದ (A3 or A4 size paper, White Background, 100-130 gsm thick) ಹಾಗೂ ವಿದ್ಯುನ್ಮಾನ (C.D) ಪ್ರತಿಗಳನ್ನು ಅಂಚೆ ಹೊದಿಕೆಯಲ್ಲಿ, ಹೊದಿಕೆಯ ಮೇಲೆ **"BESCOM EV Logo Competition"** ಎಂದು ನಮೂದಿಸಿ, ಅಂಚೆ/ಖುದ್ದಾಗಿ ಸಲ್ಲಿಸಲು ಕೋರಿದೆ. ಆಯ್ಕೆಯಾದ ಲಾಂಛನದ ವಿನ್ಯಾಸವು ಬೆವಿಕಂ ನ ಬೌದ್ಧಿಕ ಆಸ್ತಿಯಾಗುತ್ತದೆ ಮತ್ತು ಆಯ್ಕೆಯಾದ ಲಾಂಛನದ ವಿನ್ಯಾಸದ ರಚಿತರಿಗೆ 25,000 ರೂ. ಗೌರವಧನ ನೀಡಿ ಸತ್ಕರಿಸಲಾಗುವುದು.

## ವಾಹನ ನೋಂದಣಿ ಕಾರ್ಯ ಸ್ಥಗಿತ

ಬೆಂಗಳೂರು, ಡಿಸೆಂಬರ್ 26, (ಕರ್ನಾಟಕ ವಾರ್ತೆ)

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ವಾಹನ – 4 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಬೆಂಗಳೂರು ನಗರದ ಆರ್.ಟಿ.ಓ. ಕಚೇರಿಗಳಲ್ಲಿ ವಿವಿಧ ಹಂತಗಳಲ್ಲಿ ತಂತ್ರಾಂಶ ಅನುಷ್ಠಾನಕ್ಕೆ ಮುಂದಾಗಿದ್ದು, ಈಗ ಜಯನಗರದ ಆರ್.ಟಿ.ಓ. ಕಚೇರಿಯಲ್ಲಿ ಪ್ರಾರಂಭಿಸಲಾಗುತ್ತಿದೆ.

ರಾಜ್ಯ ಸಾರಿಗೆ ಇಲಾಖೆಯು ವಾಹನಗಳ ನೋಂದಣಿ ಸೇವೆಗಳಿಗೆ ಸಂಬಂಧಿಸಿದ ಕೇಂದ್ರೀಕೃತ ಹಾಗೂ ವೆಬ್ ಆಧಾರಿತ ವಾಹನ – 4 ತಂತ್ರಾಂಶವನ್ನು ನಗರದ ಜಯನಗರ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಜನವರಿ 11 ರಿಂದ ಪ್ರಾರಂಭಿಸಲು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಜನವರಿ 2 ರಿಂದ 11 ರವರೆಗೆ 9 ದಿನಗಳ ಕಾಲ ಈ ಕಚೇರಿಯಲ್ಲಿ ವಾಹನ–1 ಎಲ್ಲ ಸೇವೆಗಳು ಸ್ಥಗಿತಗೊಳ್ಳಲಿದ್ದು, ಸೇವೆಯಲ್ಲಿ ವ್ಯತ್ಯಯ ಉಂಟಾಗಲಿದೆ. ವಾಹನಗಳ ಹೊಸ ನೊಂದಣಿ, ವಾಹನ ವರ್ಗಾವಣೆ, ವಿಳಾಸ ಬದಲಾವಣೆ, ಎಫ್.ಸಿ. ನೋಂದಣಿ ಪತ್ರ ನವೀಕರಣ, ಎನ್.ಓ.ಸಿ. ವಾಹನ ಸಂಖ್ಯೆ ಮರುನೋಂದಣಿ ಮೊದಲಾದ ಸೇವೆಗಳಿಗೆ ಸಂಬಂಧಿಸಿದಂತೆ ಜಯನಗರ ಆರ್.ಟಿ.ಓ. ಕಚೇರಿಗೆ ವಾಹನ–1 ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿರುವ ಸಾರ್ವಜನಿಕರು ಜನವರಿ – 1 ರೊಳಗೆ ಕಾರ್ಯ ಮುಗಿಸಿಕೊಳ್ಳಬೇಕು.

ನಿಗದಿತ ಅವಧಿ ಬಳಿಕ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೂರು ತಿಂಗಳ ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 26, (ಕರ್ನಾಟಕ ವಾರ್ತೆ)

ಬೆಂಗಳೂರು ಉಲ್ಲಾಳ ಉಪನಗರದಲ್ಲಿರುವ ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆಯು ಕರ್ನಾಟಕದ ಏಕೈಕ ಧರ್ಮ ತಂತ್ರಜ್ಞಾನ ಸಂಸ್ಥೆಯಾಗಿದ್ದು, ಇಲ್ಲಿ ಧರ್ಮ ಮತ್ತು ಫ್ಯಾಷನ್ ತಾಂತ್ರಿಕತೆಯಲ್ಲಿ ಡಿಸೈನಿಂಗ್, ಪ್ಯಾಟರ್ನ್ ಕಟ್ಟಿಂಗ್, ಧರ್ಮ ವಸ್ತು ಮತ್ತು ಧರ್ಮ ಉಡುಪು ತಯಾರಿಕೆ ಹಾಗೂ ಲಾಸ್ಟಿಂಗ್ ಅಂಡ್ ಫುಲ್ ಶೂ ಮೇಕಿಂಗ್ ವಿಭಾಗಗಳಲ್ಲಿ ರಾಜ್ಯ ಪರಿಶಿಷ್ಟ ಜಾತಿ ಫಲಾನುಭವಿಳಿಗೆ 3 ತಿಂಗಳುಗಳ ತರಬೇತಿ ಸಮಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ನೀಡಿ, ತರಬೇತಿ ನಂತರ ಉದ್ಯೋಗ ಕಲ್ಪಿಸಲಾಗುವುದು.

ಆಸಕ್ತ ಪುರುಷ/ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹಾಗೆಯೇ ಕಿಲ್ಟ್ ಸಂಸ್ಥೆಯ ಕಚೇರಿಯಲ್ಲಿ ಹಾಗೂ ಕಿಲ್ಟ್ ಸಂಸ್ಥೆಯ ವೆಬ್‌ಸೈಟ್‌ನಲ್ಲಿ (www.kiltbangalore.ac.in) ಅರ್ಜಿ ಪಡೆದು ಭರ್ತಿಮಾಡಿದ ಅರ್ಜಿಗಳನ್ನು ಕಿಲ್ಟ್ ಸಂಸ್ಥೆಗೆ ಸಲ್ಲಿಸಲು ಕೋರಿದೆ.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–01–2019. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ದೂರವಾಣಿ ಸಂಖ್ಯೆ : 080–23480179 ಹಾಗೂ email:kiltbangalore133@gmail.com ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ)**

ಕೃಷಿ ಸಚಿವ ಎನ್. ಹೆಚ್ ಶಿವಶಂಕರ ರೆಡ್ಡಿ ಅವರು ಡಿಸೆಂಬರ್ 29 ರಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸಾವಯವ ಮತ್ತು ಸಿರಿಧಾನ್ಯ ಮೇಳ–2018 ವಸ್ತು ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅದೇ ದಿನ ಸಂಜೆ ನಗರಕ್ಕೆ ಹಿಂದಿರುಗಲಿದ್ದಾರೆ.

**ಬೆಂಗಳೂರು ಜಲಮಂಡಲಿ: ಡಿಸೆಂಬರ್ 27 ರಂದು ಸಕಾನಿಅ(ಈಶಾನ್ಯ–3)**

**ಉಪವಿಭಾಗದಲ್ಲಿ ನೀರಿನ ಅದಾಲತ್**

**ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ):**

ಬೆಂಗಳೂರು ಜಲಮಂಡಲಿಯ ಸಕಾನಿಅ(ಈಶಾನ್ಯ–3) ಉಪವಿಭಾಗದಲ್ಲಿ ಗುರುವಾರ ದಿನಾಂಕ: 27.12.2018 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆಯಲ್ಲಿ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್ ಅನ್ನು ಬೆಳಗ್ಗೆ: 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ:27.12.2018 ರಂದು ಸಕಾನಿಅ(ಈಶಾನ್ಯ–3) ಉಪವಿಭಾಗದ ವ್ಯಾಪ್ತಿಗೆ ಬರುವ ಆರ್.ಟಿ.ನಗರ, ಕಾವಲ್ ಭೈರಸಂದ್ರ, ಸಂಜಯನಗರ, ಬಿ.ಇ.ಎಲ್ ರಸ್ತೆ, ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು 3ನೇ ಅಡ್ಡರಸ್ತೆ, ಪಿ&ಟಿ ಕಾಲೋನಿ, ಆರ್.ಟಿ.ನಗರ ಇಲ್ಲಿ ನಡೆಸಲಿದ್ದು ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಈಶಾನ್ಯ): 22945124. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಈಶಾನ್ಯ–3) ಉಪವಿಭಾಗ: 22945139.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ.

**BWSSB: Water Adalath in AEE(North East-3) sub division**

**on December 27th**

BWSSB water Adalath is held on 27.12.2018 in AEE(North East-3) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of R.T.Nagar, Kaval Byrasandra, Sanjayanagara, BEL Road, Service station coming under AEE(North East-3) sub division, will be discussed in detail & problems will be settled in the office of the Assistant Executive Engineer (North East-3) sub division, 3rd cross, P&T Colony, RT Nagar, Bangalore.

Details regarding the adalath can be obtained by the office of EE(North East): 22945124, or office of AEE(North East-3): 22945139.

For any problems regarding the water supply and all, publics can contact 24x7 call centre: 22238888 helpline number:1916 & whats app no: 8762228888.

Public can utilize this adalath facilities to solve the problems regarding water supply.